**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಗುಂಡ್ಲುಪೇಟೆ**

**ಸಿ.ಸಿ. ಸಂಖ್ಯೆ:** 520/2025

ಫ್ರಾಸಾ – 7

ಚಾಸಾ – 6

**ಸಾಕ್ಷಿಯು ದಿಃ 17.10.2025 ರಂದು ನ್ಯಾಯಾಲಯದಲ್ಲಿ ಹಾಜರಿದ್ದು ಪ್ರಮಾಣ ವಚನ ಭೋಧಿಸಲಾಯಿತು.**

| | | |
|---|---|---|
| ಹೆಸರು | : | ಜೀವನ್ |
| ತಂದೆಯ ಹೆಸರು | : | ಶಿವಣ್ಣ |
| ವಯಸ್ಸು | : | 15 ವರ್ಷ |
| ವೃತ್ತಿ | : | ವಿದ್ಯಾರ್ಥಿ |
| ವಾಸಸ್ಥಳ | : | ಮಹಾಲಕ್ಷ್ಮಿ ಬಡಾವಣೆ ಬೆಂಗಳೂರು |

ಬಾಲಕನು ಹೇಳಿಕೆ ನೀಡಲು ಸಮರ್ಥನಿದ್ದಾನೆ ಎಂಬ ಬಗ್ಗೆ ಆತನ ಹೆಸರು, ಆತ ತಾನು ಮದರ್ ಥೆರೆಸಾ ಶಾಲೆ, ಮಹಾಲಕ್ಷ್ಮಿ ಬಡಾವಣೆ, ಬೆಂಗಳೂರಿನಲ್ಲಿ ಓದುತ್ತಿರುವುದಾಗಿ, ನ್ಯಾಯಾಲಯದ ಬಗ್ಗೆ ಕೇಳಲಾಗಿ ಬಾಲಕನು ನ್ಯಾಯಾಲಯದ ಬಗ್ಗೆ ತಿಳಿದುಕೊಂಡಿದ್ದು ಆತನ ಹೇಳಿಕೆಗಳನ್ನು ಏನಾದರು ಪ್ರಕರಣ ಇದ್ದರೆ ನ್ಯಾಯಾಲಯದಲ್ಲಿ ಬಂದು ನ್ಯಾಯ ಪಡೆದುಕೊಳ್ಳಬಹುದು ಎಂದು ಹೇಳಿರುತ್ತಾನೆ. ಆತನನ್ನು ಗಮನಿಸಿದಾಗ ಆತ ತನ್ನ ಸ್ವಇಚ್ಛಾ ಹೇಳಿಕೆಗಳನ್ನು ಹೇಳಲು ಸಮರ್ಥನಿದ್ದಾನೆ ಮತ್ತು ಆತನಿಂದ ಹೇಳಿಕೆಗಳನ್ನು ಪಡೆದುಕೊಳ್ಳಬಹುದು ಎಂಬ ಬಗ್ಗೆ ನ್ಯಾಯಾಲಯಕ್ಕೆ ಮನವರಿಕೆಯಾದ ನಂತರ ಆತನ ಹೇಳಿಕೆಗಳನ್ನು ಪಡೆದುಕೊಳ್ಳಲು ಈ ನ್ಯಾಯಾಲಯ ಮುಂದಾಗಿರುತ್ತದೆ.

**ಮುಖ್ಯ ವಿಚಾರಣೆ :ಮಾನ್ಯ ಎಪಿಪಿಯವರಿಂದ :-**

ಚಾಸಾ 5 ನನ್ನ ತಾಯಿ. ನಾನು ಹುಟ್ಟಿದಾಗಿನಿಂದಲೂ ಬೆಂಗಳೂರಿನಲ್ಲಿ ಇದ್ದೇನೆ. ನನ್ನ ಸ್ವಂತ ಊರು ಬೊಮ್ಮಲಾಪುರ. ಚಾಸಾ 7 ನನ್ನ ತಂಗಿ. ನನ್ನ ದೊಡ್ಡಮ್ಮನ ಮಗಳ ಹೆಸರು ಸೋನು. ದಿಃ 28.06.2019 ರಂದು ಬೆಳಿಗ್ಗೆ 5.15 ಗಂಟೆ ಸಮಯದಲ್ಲಿ ಬೆಂಗಳೂರಿನಿಂದ ಬೊಮ್ಮಲಾಪುರಕ್ಕೆ ನನ್ನ ತಾತ ಮೃತಪಟ್ಟಿರುತ್ತಾರೆ ಎಂದು ನಾನು, ನನ್ನ ದೊಡ್ಡಪ್ಪ , ದೊಡ್ಡಮ್ಮ , ಅವರ ಮಗಳು ಸೋನು, ನನ್ನ ತಂಗಿ, ತಾಯಿ ಮತ್ತು ನನ್ನ ತಂದೆ ಲಗೇಜ್ ಆಟೋದಲ್ಲಿ ಹೋಗುತ್ತಿದ್ದಾಗ, ದೊಡ್ಡಮ್ಮ ಮತ್ತು ಸೋನು ಮುಂದೆ ಕುಳಿತಿದ್ದರು, ನಾವುಗಳ್ಲೆರು ಹಿಂದೆ ಕುಳಿತಿದ್ದೆವು. ನಾನು ಅದರಲ್ಲಿ ಮಲಗಿಕೊಂಡಿದ್ದೆ ಆಗ ಅಪಘಾತವಾಗಿತ್ತು. ನಾನು ಅದರಲ್ಲಿ ಮಲಗಿಕೊಂಡಿದ್ದೆ ಆಗ ಅಪಘಾತವಾಗಿತ್ತು. ಸದರಿ ಅಪಘಾತದಿಂದ ನನ್ನ ದೊಡ್ಡಮ್ಮನಿಗೆ ಕೈ ಕಾಲು ಪೆಟ್ಟಾಗಿತ್ತು, ನನಗೆ ಮೂಗಿನ ಬಳಿ ಪೆಟ್ಟಾಗಿತ್ತು, ನನ್ನ ತಂಗಿಗೆ ಕೆನ್ನೆಯ ಬಳಿ ಗಾಯವಾಗಿತ್ತು. ಸೋನು ಅಪಘಾತದಲ್ಲಿ ಅಲ್ಲಿಯೇ ಮೃತಪಟ್ಟಿರುತ್ತಾರೆ.

**ಪಾಟೀ ಸವಾಲು :- ಆರೋಪಿ ಪರ ವಕೀಲರಿಂದ**

ಅಪಘಾತವಾದ ಸಮಯದಲ್ಲಿ ನಾನು ಮಲಗಿಕೊಂಡಿದ್ದೆ ಎಂದರೆ ಸರಿ. ನಾನು ಮಲಗಿದ್ದ ಕಾರಣ ಅಪಘಾತವು ಯಾರ ತಪ್ಪಿನಿಂದ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ ಎಂದರೆ ಸರಿ. ಪೊಲೀಸರು ನನ್ನನ್ನು ವಿಚಾರಣೆ ಮಾಡಿಲ್ಲ ಮತ್ತು ನಾನು ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ದೀಪು ಎಂ.ಟಿ.)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಗುಂಡ್ಲುಪೇಟೆ